619 (817) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2004–05, 2005–06 ಮತ್ತು ಮೇ 2006 ರವರೆವಿಗೆ ಅರಣ್ಯ ಇಲಾಖೆಯ ವಿವಿಧ ಯೋಜನೆಗಳಲ್ಲಿ ಹಾಗೂ ಸಾಮಾಜಿಕ ಅರಣ್ಯಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ರಾಜ್ಯದಲ್ಲಿ ನೆಡಲಾದ ಗಿಡಗಳು ಎಷ್ಟು; ಜಿಲ್ಲಾವಾರು ಮಾಹಿತಿ ಒದಗಿಸುವುದು;

ಆ) ಇದಕ್ಕಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು ಹಾಗೂ ಅನುದಾನವನ್ನು ಪೂರ್ಣವಾಗಿ ಬಳಸಿಕೊಳ್ಳಲಾಗಿದೆಯೇ;

ಇ) ಬಳಸಿಕೊಳ್ಳಲಾಗದೆ ಇದ್ದಲ್ಲಿ ಇದಕ್ಕೆ ಕಾರಣವೇನು;

ಈ) ಇದರಿಂದ ರಾಜ್ಯದಲ್ಲಿ ಅರಣ್ಯಾಭಿವೃದ್ಧಿ ಹೊಂದಲಾದ ಪ್ರದೇಶಗಳ ವಿಸ್ತೀರ್ಣವೆಷ್ಟು; ಜಿಲ್ಲಾವಾರು ಮಾಹಿತಿ ಒದಗಿಸುವುದು;

ಉ) ರಾಜ್ಯದಲ್ಲಿನ ಅರಣ್ಯ ಪ್ರದೇಶಗಳಲ್ಲಿ ಅನಧಿಕೃತವಾಗಿ ಗಿಡಗಳನ್ನು ಕಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಊ) ಹಾಗಿದ್ದಲ್ಲಿ ಇದರ ನಿವಾರಣೆಗೆ ತೆಗೆದುಕೊಂಡ ಕ್ರಮಗಳೇನು ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮವೇನು: (ವಿವರವನ್ನು ಒದಗಿಸುವುದು)?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 2004–05, 2005–06 ಮತ್ತು ಮೇ 2006 ರವರೆಗೆ ಅರಣ್ಯ ಇಲಾಖೆಯ ವಿವಿಧ ಯೋಜನೆಗಳಲ್ಲಿ ಹಾಗೂ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ನೆಡಲಾದ ಗಿಡಗಳ ವಿವರಗಳು ಈ ಕೆಳಕಂಡಂತಿವೆ.

1	2004–05	263.854 ಲಕ್ಷ ಸಸಿಗಳು
2	2005–06	316.423 ಲಕ್ಷ ಸಸಿಗಳು
3	2006–07ನೇ ಸಾಲಿನ ಮೇ 2006ರ ವರೆಗೆ	ಇಲ್ಲ

ಜಿಲ್ಲಾವಾರು ವಿವರಗಳನ್ನು ನಮೂನೆ –1 ರಲ್ಲಿ ಸಲ್ಲಿಸಿದೆ.

ಆ) ಅರಣ್ಯೀಕರಣ ಕಾಮಗಾರಿಗಳಿಗಾಗಿ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಒಟ್ಟು ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.

2004–05	2005–06	2006–07
(ರೂ. ಲಕ್ಷಗಳಲ್ಲಿ)	(ರೂ. ಲಕ್ಷಗಳಲ್ಲಿ)	(ಮೇ 2006 ರವರೆಗೆ)
9221.120	9799.582	1530

ಬಿಡುಗಡೆಯಾದ ಅನುದಾನವನ್ನು ಪೂರ್ಣವಾಗಿ ಬಳಸಿಕೊಳ್ಳಲಾಗಿರುವುದಿಲ್ಲ. ಆದ್ದರಿಂದ ಈ ಕೆಳಕಂಡಂತೆ ಅನುದಾನವನ್ನು ಅದ್ಯರ್ಪಣೆ ಮಾಡಲಾಗಿದೆ.

2004–05	2005–06	2006–07
(ರೂ. ಲಕ್ಷಗಳಲ್ಲಿ)	(ರೂ. ಲಕ್ಷಗಳಲ್ಲಿ)	(ಮೇ 2006 ರವರೆಗೆ)
54.700	85.785	–

ಇ) 2005–06ನೇ ಸಾಲಿನ ಜೆಬಿಐಸಿ ನೆರವಿನ ಕೆಎಸ್ಎಫ್ಎಂಬಿಸಿ ಯೋಜನೆಯು ತಡವಾಗಿ ಮಂಜೂರಾಗಿದ್ದು, ಅನುದಾನವು ಆರ್ಥಿಕ ವರ್ಷದ ಆರು ತಿಂಗಳೂ ಕಳೆದ ನಂತರ ಬಿಡುಗಡೆಯಾಗಿರುತ್ತದೆ. ಆದುದರಿಂದ ಅನುದಾನವನ್ನು ಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗಿರುವುದಿಲ್ಲ.

ಈ) 2004–05 ಮತ್ತು 2005–06 ರಲ್ಲಿ ರಾಜ್ಯದಲ್ಲಿ ಒಟ್ಟು 82.312.20 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯಾಭಿವೃದ್ಧಿ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ :–

39,904.45 ಹೆಕ್ಟೇರ್ 2004–05

42,407.75 ಹೆಕ್ಟೇರ್ 2005–06

ಜಿಲ್ಲಾವಾರು ವಿವರಗಳನ್ನು ನಮೂನೆ – 2 ರಲ್ಲಿ ಸಲ್ಲಿಸಿದೆ.

ಉ) ಅರಣ್ಯ ಪ್ರದೇಶದಲ್ಲಿ ಅಲ್ಲಲ್ಲಿ ವಿರಳವಾಗಿ ಅಕ್ರಮ ಕಡೆತಲೆಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಊ) ಅಕ್ರಮ ಕಡಿತಲೆಗಳನ್ನು ತಡೆಗಟ್ಟುವ ಬಗ್ಗೆ ಬೀಟ್ ಅರಣ್ಯ ರಕ್ಷಕರ ಮತ್ತು ಶಾಖಾ ವನಪಾಲಕರು ಅರಣ್ಯ ಪ್ರದೇಶದಲ್ಲಿ ನಿರಂತರ ಗಸ್ತು ತಿರುಗುತ್ತಾರೆ. ಅಲ್ಲದೆ ಅರಣ್ಯ ಸಂಚಾರಿ ದಳವು ಕೂಡ ಅರಣ್ಯ ಪ್ರದೇಶದಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವ ಬಗ್ಗೆ ಅನಿರೀಕ್ಷಿತ ತಪಾಸಣೆ ನಡೆಸುತ್ತಾರೆ. ಅಕ್ರಮ ಕಡಿತಲೆಗಳು ಕಂಡುಬಂದಲ್ಲೆಲ್ಲಾ ಅರಣ್ಯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಅರಣ್ಯ ಅಪರಾಧಿಗಳನ್ನು ಪತ್ತೆಹಚ್ಚಿ ದಂಡನೆಯನ್ನು ವಿಧಿಸಲಾಗಿದೆ. ಕಳೆದ ವರ್ಷದಲ್ಲಿ ಒಟ್ಟು 11014 ಅರಣ್ಯ ಮೊಕದ್ದಮೆಗಳನ್ನು ಪತ್ತೆಹಚ್ಚಲಾಗಿದೆ. ಒಟ್ಟು 258 ವಾಹನಗಳನ್ನು ಅಮಾನತ್ತು ಪಡಿಸಲಾಗಿದೆ. ಅವುಗಳಲ್ಲಿ 106 ವಾಹನಗಳನ್ನು ಮುಟ್ಟುಗೋಲು ಹಾಕಲಾಗಿದೆ. ಸ್ವತ್ತಿನ ಮೌಲ್ಯ ಮತ್ತು ದಂಡನೆಯ ರೂಪದಲ್ಲಿ ರೂ. 224.71 ಲಕ್ಷಗಳನ್ನು ವಸೂಲು ಮಾಡಲಾಗಿದೆ ರೂ. 57.48 ಲಕ್ಷ ಮೌಲ್ಯದ 12697 ಕೇಜಿ ಶ್ರೀಗಂಧವನ್ನು 3484.16 ಘ.ಮೀ. ನಾಟಾವನ್ನು ಅಮಾನತ್ತು ಪಡಿಸಲಾಗಿದೆ. ಈ ಕ್ರಮ ಕಡಿತಲೆಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ವರ್ಗದವರ ಕರ್ತವ್ಯ ಲೋಪ ಕಂಡುಬಂದಲ್ಲಿ ಅಂತಹ ನೌಕರರನ್ನು ಶಿಸ್ತುಕ್ರಮಕ್ಕೆ ಗುರಿಪಡಿಸಲಾಗಿದೆ.

ನಮೂನೆ – 1

2004-05, 2005-06 ಹಾಗೂ ಮೇ 2006 ರವರೆಗೆ ಅರಣ್ಯ ಇಲಾಖೆಯ ವಿವಿಧ ಯೋಜನೆಗಳಡಿ ಹಾಗೂ ಸಾಮಾಜಿಕ ಅರಣ್ಯ ಯೋಜನೆಯಡಿ ರಾಜ್ಯದಲ್ಲಿ ನೆಡಲಾದ ಗಿಡಗಳ ವಿವರ

ಕ್ರ. ಸಂ.	ಜಿಲ್ಲೆಗಳು	2004-05ನೇ ಸಾಲಿನಲ್ಲಿ ನೆಡಲಾದ ಗಿಡಗಳ ಸಂಖ್ಯೆ (ಲಕ್ಷಗಳಲ್ಲಿ)	2005-06ನೇ ಸಾಲಿನಲ್ಲಿ ನೆಡಲಾದ ಗಿಡಗಳ ಸಂಖ್ಯೆ (ಲಕ್ಷಗಳಲ್ಲಿ)	2006 ಮೇ ವರೆಗೆ ಸಾಲಿನಲ್ಲಿ ನೆಡಲಾದ ಗಿಡಗಳ ಸಂಖ್ಯೆ (ಲಕ್ಷಗಳಲ್ಲಿ)
1	2	3	4	5
1	ಬೆಂಗಳೂರು ಗ್ರಾಮಾಂತರ	10.106	10.002	–
2	ಬೆಂಗಳೂರು ನಗರ	1.237	1.880	–
3	ಬೆಳಗಾಂ	22.980	17.063	–
4	ಬಳ್ಳಾರಿ	3.172	1.504	–
5	ಬಾಗಲಕೋಟೆ	2.393	3.896	–
6	ಬೀದರ್	7.241	8.060	–
7	ಬಿಜಾಪುರ	0.943	0.463	–
8	ಚಾಮರಾಜನಗರ	0.585	1.620	–
9	ಚಿಕ್ಕಮಗಳೂರು	15.209	10.967	–
10	ಚಿತ್ರದುರ್ಗ	4.043	7.840	–
11	ದಕ್ಷಿಣ ಕನ್ನಡ	6.942	9.654	–
12	ದಾವಣಗೆರೆ	7.088	15.092	–
13	ಧಾರವಾಡ	7.089	5.587	–
14	ಗದಗ್	8.052	3.222	–
15	ಗುಲ್ಬರ್ಗ	11.614	4.848	–
16	ಹಾಸನ	5.605	8.518	–
17	ಹಾವೇರಿ	8.048	7.259	–
18	ಕೊಡಗು	8.520	3.969	–
19	ಕೋಲಾರ	23.171	17.372	–

20	ಕೊಪ್ಪಳ	6.567	22.902	–
21	ಮಂಡ್ಯ	5.105	6.455	–
22	ಮೈಸೂರು	11.846	7.048	–
23	ರಾಯಚೂರು	4.610	3.055	–
24	ಶಿವಮೊಗ್ಗ	21.291	32.490	–
25	ತುಮಕೂರು	17.638	25.460	–
26	ಉಡುಪಿ	3.140	2.211	–
27	ಉತ್ತರ ಕನ್ನಡ	36.096	77.708	–
28	ಸಂಶೋಧನೆ	3.219	0.279	–
	ಒಟ್ಟು	**263.854**	**316.423**	–

ನಮೂನೆ – 2

2004-05, 2005-06 ಹಾಗೂ ಮೇ 2006 ರವರೆಗೆ ಅರಣ್ಯ ಇಲಾಖೆಯ ವಿವಿಧ ಯೋಜನೆಗಳಡಿ ಹಾಗೂ ಸಾಮಾಜಿಕ ಅರಣ್ಯ ಯೋಜನೆಯಡಿ ರಾಜ್ಯದಲ್ಲಿ ಅರಣ್ಯಾಭಿವೃದ್ಧಿ ಮಾಡಿದ ಪ್ರದೇಶಗಳ ವಿವರ (ಹೆಕ್ಟೇರ್‌ಗಳಲ್ಲಿ)

ಕ್ರ. ಸಂ.	ಜಿಲ್ಲೆಗಳು	2004-05	2005-06	2006 ಮೇ ವರೆಗೆ
1	2	3	4	5
1	ಬೆಂಗಳೂರು ಗ್ರಾಮಾಂತರ	943.00	1.417.00	–
2	ಬೆಂಗಳೂರು ನಗರ	505.00	605.50	–
3	ಬೆಳಗಾಂ	2,673.00	1,802.00	–
4	ಬಳ್ಳಾರಿ	401.50	550.50	–
5	ಬಾಗಲಕೋಟೆ	295.00	1,613.00	–
6	ಬೀದರ್	1,083.00	1,437.00	–
7	ಬಿಜಾಪುರ	343.00	455.00	–
8	ಚಾಮರಾಜನಗರ	122.00	239.00	–
9	ಚಿಕ್ಕಮಗಳೂರು	1,634.50	1,459.50	–
10	ಚಿತ್ರದುರ್ಗ	581.50	1,332.00	–

11	ದಕ್ಷಿಣ ಕನ್ನಡ	1,281.00	1,448.00	–
12	ದಾವಣಗೆರೆ	1,019.50	2,496.00	–
13	ಧಾರವಾಡ	1,283.00	691.00	–
14	ಗದಗ್	1,490.00	760.00	–
15	ಗುಲ್ಬರ್ಗ	2,516.00	2,042.00	–
16	ಹಾಸನ	646.00	883.00	–
17	ಹಾವೇರಿ	812.00	1,307.00	–
18	ಕೊಡಗು	1,352.55	867.00	–
19	ಕೋಲಾರ	2,457.75	1,846.00	–
20	ಕೊಪ್ಪಳ	848.00	1,343.50	–
21	ಮಂಡ್ಯ	798.00	1,111.25	–
22	ಮೈಸೂರು	2,323.15	1,378.50	–
23	ರಾಯಚೂರು	923.00	605.50	–
24	ಶಿವಮೊಗ್ಗ	2,607.00	2,925.50	–
25	ತುಮಕೂರು	2,259.00	2,754.00	–
26	ಉಡುಪಿ	145.00	94.00	–
27	ಉತ್ತರ ಕನ್ನಡ	8,033.00	8,899.00	–
28	ಸಂತೋಧನೆ	529.00	46.00	–
	ಒಟ್ಟು	**39,904.45**	**42,407.75**	–

620 (1120) ಶ್ರೀ ಬೋಪಯ್ಯ. ಕೆ.ಜಿ. (ಮಡಿಕೇರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಎಷ್ಟು ಹುದ್ದೆಗಳು ಖಾಲಿ ಇವೆ? (ವಿವರಗಳನ್ನು ಒದಗಿಸುವುದು)

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಪ್ರಸ್ತುತ 24 ಹುದ್ದೆಗಳು ಕಂದಾಯ ಇಲಾಖೆಯಲ್ಲಿ ಖಾಲಿ ಇರುತ್ತದೆ.

1. ಉಪವಿಭಾಗಾಧಿಕಾರಿ	1
2. ಶಿರಸ್ತೇದಾರ್	10
3. ಪ್ರ.ದ.ಸ.	6
4. ಬೆರಳಚ್ಚುಗಾರರು	7
ಒಟ್ಟು	**24**